


ಒಡಿಶಾದ ಭುವನೇಶ್ವರದಲ್ಲಿ ಇದೇ ತಿಂಗಳ 28ರಿಂದ ಡಿ. 16ರವರೆಗೆ ವಿಶ್ವಕಪ್ ಹಾಕಿ ಪಂದ್ಯಾವಳಿ ಶುರು. ಹಿಂದೊಮ್ಮೆ ವಿಶ್ವ ಹಾಕಿ ಸಾಮ್ರಾಟನಾಗಿದ್ದ ಭಾರತೀಯ ತಂಡ, ಕಳೆದ ಮೂರು ದಶಕಗಳಲ್ಲಿ ಕಂಡ ಕುಸಿತ ಅಷ್ಟಿಷ್ಟಲ್ಲ. ಆದರೆ, ಇತ್ತೀಚಿನ ವರ್ಷಗಳಲ್ಲಿ ದೇಶದ ಹಾಕಿ ಈಗ ನಿಧ ನಿಧಾನವಾಗಿ ಚಿಗುರುತ್ತ ಸೆಟೆದು ನಿಲ್ಲುವ ಪ್ರಯತ್ನದಲ್ಲಿದೆ. ನಿರ್ದಿಷ್ಟ ಆಟಗಾರರಿಗಿಂತ ಸಾಂಘಿಕವಾಗಿ 'ಪವರ್ ಗೇಮ್' ಆಡುವ ಪ್ರಯೋಗಶಾಲೆಯಾಗಿ ಭಾರತ ತಂಡ ಕಾಣುತ್ತಿದೆ. ಈ ಸಲ ವಿಶ್ವಕಪ್ ಅಂಗಳದಲ್ಲಿ ಭಾರತ ತಂಡ ಸೆಮಿಫೈನಲ್‌ಗೆ ಹೆಜ್ಜೆ ಇಟ್ಟರೂ ಕ್ರೀಡಾಭಿಮಾನಿಗಳು ಎದೆಯುಬ್ಬಿಸಬಹುದು.

■ ವಿಶಾಖ ಎನ್.